# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ
ವೀರಾಜಪೇಟೆ.
ದೂರವಾಣಿ ಸಂಖ್ಯೆ: 08274-255319
email:aeesdvpet@gmail.com


ಸಕಾನಿಇಂ(ವಿ)/ಕಾಮತ್ತುಪಾ ಉವಿ/ವಿ.ಪೇಟೆ /2019-20/ ದಿನಾಂಕ:

## ಸಭೆಯ ನಡಾವಳಿಗಳು

ದಿನಾಂಕ 29.06.2019 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಮಹದೇವಸ್ವಾಮಿ ಪ್ರಸನ್ನ : ಅಧೀಕ್ಷಕ ಇಂಜಿನಿಯರ್ (ವಿ), ಕೊಡಗು ಚಾಮನಗರ ವೃತ್ತ.
2. ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
3. ಶ್ರೀ.ಪಿ.ಎಸ್.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ.
4. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
5. ಶ್ರೀ.ಶಿವನಗೌಡ ಅಯ್ಯನಗೌಡ ಪಾಟೀಲ : ಸಹಾಯಕ ಇಂಜಿನಿಯರ್(ವಿ), ವಿರಾಜಪೇಟೆ
6. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ತಾಂ), ವಿರಾಜಪೇಟೆ ಉಪವಿಭಾಗ.
7. ಶ್ರೀ.ಹೆಚ್.ಎಸ್.ರಮೇಶ್ : ಕಿರಿಯ ಇಂಜಿನಿಯರ್(ತಾಂ), ಅಮ್ಮತ್ತಿ ಶಾಖೆ.
8. ಶ್ರೀಮತಿ.ಬಿ.ಜಿ.ಚಂಪಾವತಿ : ಕಿರಿಯ ಇಂಜಿನಿಯರ್(ತಾಂ), ಸಿದ್ದಾಪುರ ಶಾಖೆ.
9. ಶ್ರೀ.ಸಿ.ಬಿ.ದೇವಯ್ಯ : ಕಿರಿಯ ಇಂಜಿನಿಯರ್(ತಾಂ), ಪಾಲಿಬೆಟ್ಟ ಶಾಖೆ.
10. ಶ್ರೀ.ಎಂ.ಎಸ್.ಹರೀಶ್ : ಹಿರಿಯ ಸಹಾಯಕರು, ಕಂದಾಯ ಶಾಖೆ, ವಿರಾಜಪೇಟೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಅಧೀಕ್ಷಕ ಇಂಜಿನಿಯರ್(ವಿ) ರವರಾದ ಶ್ರೀ.ಮಹದೇವಸ್ವಾಮಿ ಪ್ರಸನ್ನ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು. ದಿನಾಂಕ:10.01.2019 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ವಾಜೀರ್, ಐಮಂಗಲ 9481033257 | * ತಮ್ಮ ವಾಸದ ಮನೆಗೆ ಸೌಭಾಗ್ಯ ಯೋಜನೆಯಡಿ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದ್ದು ಇದುವರಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವ ಬಗ್ಗೆ. | * ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಈಗಾಗಲೇ ಸದರಿ ಯೋಜನೆಯನ್ನು ಮೆ:ಪ್ರೇಮ ಇಂಡಸ್ಟ್ರೀಸ್ ರವರಿಗೆ ಟೆಂಡರ್ ನೀಡಿರುವುದಾಗಿ ತಿಳಿಸಿ, ಕಾರ್ಯ ಪ್ರಗತಿಯಲ್ಲಿದ್ದು ಸದರಿ ಸ್ಥಾವರಕ್ಕೆ ಅತಿ ಶೀಘ್ರದಲ್ಲಿಯೇ ಸಂಪರ್ಕ ಕಲ್ಪಿಸಲಾಗುವುದೆಂದು ತಿಳಿಸಿದರು. |

| | | | |
|---|---|---|---|
| | ಶ್ರೀ.ನಂಜಪ್ಪ, ಕುಂಜಿಲಗೇರಿ, ದೂ.9483308333 | * ಕುಂಜಿಲಗೇರಿ ಹಾಗೂ ಬೊಳ್ಳುಮಾಡು ಗ್ರಾಮಕ್ಕೆ ಪ್ರಸಕ್ತ ಮೂರ್ನಾಡು ವಿದ್ಯುತ್ ಉಪಕೇಂದ್ರದಿಂದ ಹೊರ ಹೊಮ್ಮುವ ಪಾರಾಣೆ ಮಾರ್ಗದಿಂದ ವಿದ್ಯುತ್ ಪೂರೈಸುತ್ತಿದ್ದು ಸದರಿ ಗ್ರಾಮಕ್ಕೆ ವಿರಾಜಪೇಟೆ ವಿದ್ಯುತ್ ಉಪಕೇಂದ್ರದಿಂದ ಹೊರ ಹೊಮ್ಮುವ ಭೇತ್ರಿ ಮಾರ್ಗದಿಂದ ವಿದ್ಯುತ್ ಸಂಪರ್ಕ ಒದಗಿಸಲು ಕೋರಿ ಲಿಖಿತ ರೀತಿಯಲ್ಲಿ ನೀಡಿರುತ್ತಾರೆ.<br>* ಭೇತ್ರಿ ಹೊಳೆಯ ದಡದಲ್ಲಿ ಹಾದುಹೋಗುವ 33 ಕೆ.ವಿ ಮೂರ್ನಾಡು ವಿದ್ಯುತ್ ಮಾರ್ಗವು ಮಳೆಗಾಲದ ಸಂಧರ್ಭ ಹೊಳೆಯ ಹರಿವು ಹೆಚ್ಚಾದ ಸಂಧರ್ಭದಲ್ಲಿ ಅಡ್ಡವಾಗಿ ಸಾಗುವ ವಿದ್ಯುತ್ ತಂತಿಯು ಮುಳುಗಡೆಯಾಗುವ ಸಾಧ್ಯತೆಯಿದ್ದು ಸದರಿ ಮಾರ್ಗವನ್ನು ಎತ್ತರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಸಕ್ತ ಆರ್ಥಿಕ ಸಾಲಿನ 2019-2020 ಬಜೆಟ್ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸದೇ ಇದ್ದುದಾಗಿ ತಿಳಿಸಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಸ್ಥಳ ಪರಿಶೀಲಿಸಿ ಸದರಿ ಗ್ರಾಮಗಳನ್ನು ವಿರಾಜಪೇಟೆ ವಿದ್ಯುತ್ ಉಪಕೇಂದ್ರದಿಂದ ಹೊರ ಹೊಮ್ಮುವ ಭೇತ್ರಿ ಮಾರ್ಗಕ್ಕೆ ಅಳವಡಿಸಲು ತಾಂತ್ರಿಕ ಅಂಶಗಳನ್ನು ಪರಿಗಣಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.<br>* ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತ ಸದರಿ ಮಾರ್ಗವು ಮಡಿಕೇರಿ ಉಪವಿಭಾಗಕ್ಕೆ ಸಂಭಂಧಿಸಿದ್ದು, ಸದರಿ ಮಾರ್ಗವನ್ನು ಎತ್ತರಿಸಲು ಹೊಳೆಯ ದಡದಲ್ಲಿ ಟವರ್ ಅಳವಡಿಸಲು ಸ್ಥಳ ಪರಿಶೀಲಸುವಂತೆ ಸಂಭಂಧಪಟ್ಟ ಮೂರ್ನಾಡು ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 3 | ಶ್ರೀ.ಪೂಣಚ್ಚ, ಬಾಡಗ ಗ್ರಾಮ ದೂ.9448634371 | * ವಿರಾಜಪೇಟೆ ಶಾಖಾ ವ್ಯಾಪ್ತಿಗೆ ಒಳಪಡುವ ವಿ.ಎಫ್-2 ಗೋಣಿಕೊಪ್ಪ ವಿದ್ಯುತ್ ಮಾರ್ಗದಲ್ಲಿ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲು ತಾತ್ಕಾಲಿಕ ಗ್ಯಾಂಗ್‌ಮನ್ ಹಾಗೂ ನಿಗಮದ ನೌಕರರ ಕೊರತೆಯಿಂದ ಸಾರ್ವಜನಿಕರಿಗೆ ವಿದ್ಯುತ್ ಪೂರೈಕೆಯಲ್ಲಿ ವಿಳಂಭವಾಗುತ್ತಿದ್ದು.<br>* ಎಲ್.ಇ.ಡಿ ಬಲ್ಬ್ ಹಾಗೂ ಫ್ಯಾನ್ ಗಳನ್ನು ಏಜೆನ್ಸಿಯವರಿಂದ ಖರೀದಿಸಿದ್ದು ದುರಸ್ಥಿಗೊಂಡ ಬಲ್ಬುಗಳನ್ನು ಬದಲಾಯಿಸಲು ಸಂಭಂಧಪಟ್ಟ ಏಜೆನ್ಸಿಯವರು ಅನುಪಸ್ಥಿತಿಯ ಬಗ್ಗೆ ಕೇಳಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ವಿಚಾರಕ್ಕೆ ಸಂಭಂಧಿಸಿದಂತೆ ಈಗಾಗಲೇ ತಾತ್ಕಾಲಿಕ ಗ್ಯಾಂಗ್ ಮೆನ್‌ಗಳನ್ನು ಪೂರೈಸಲು ಸ್ಪಾಕ್ ಎಲೆಕ್ಟ್ರಿಕಲ್ಸ್ ರವರನ್ನು ನಿಯೋಜಿಸಲಾಗಿದ್ದು ಸದರಿ ಮಾರ್ಗದಲ್ಲಿ ವಿದ್ಯುತ್ ಅಡಚಣೆಯನ್ನು ತಪ್ಪಿಸಲು ಸೂಕ್ತ ನಿರ್ವಹಣೆ ನಡೆಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು.<br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಅಭಿಯಂತರರು(ವಿ) ರವರು ಮಾತನಾಡುತ್ತ ಸದರಿ ಏಜೆನ್ಸಿಯವರ ದೂರವಾಣಿ ಸಂಖ್ಯೆಯನ್ನು ಪಡೆದು ಸಾರ್ವಜನಿಕರಿಗೆ ಒದಗಿಸುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 4 | ಶ್ರೀ.ಅಶೋಕ, ಲಲಿತ ಹಾಗೂ ಇತರ ಪಾಲಂಗಾಲ ಗ್ರಾಮಸ್ಥರು ಪಾಲಂಗಾಲ ಗ್ರಾಮ ದೂ.9483434797 | * ಪಾಲಂಗಾಲ ಗ್ರಾಮಕ್ಕೆ ಪ್ರಸಕ್ತ 63 ಕೆ.ವಿ.ಎ ಮ್ಯಾಥ್ಯು ಪರಿವರ್ತಕದಿಂದ ಸಂಪರ್ಕ ಒದಗಿಸಿದ್ದು ಸದರಿ ಪರಿವರ್ತಕದಲ್ಲಿ ಸುಮಾರು 100 ಮನೆಗಳಿದ್ದು ಹಾಗೂ ಎಲ್.ಟಿ ಮಾರ್ಗವು ಪರಿವರ್ತದಿಂದ ಅತೀ ದೂರದವರಗೆ ವಿಸ್ತರಿಸಿದ್ದು ವಿದ್ಯುತ್ ವೋಲ್ಟೇಜ್ ಸಮಸ್ಯೆಯನ್ನು ಎದುರಿಸುತ್ತಿದ್ದು, ತಮ್ಮ ಗ್ರಾಮಕ್ಕೆ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವಂತೆ ಲಿಖಿತ ರೂಪದಲ್ಲಿ ಕೋರಿರುತ್ತಾರೆ. | * ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತ ಸದರಿ ಗ್ರಾಮದಲ್ಲಿ ಪರಿವರ್ತಕವನ್ನು ಅಳವಡಿಸಲು ಸ್ಥಳ ಪರಿಶೀಲಿಸಲಾಗಿದ್ದು ಸುಮಾರು 40 ಕಂಬದ ಅವಶ್ಯಕತೆಯಿರುವುದಾಗಿ ತಿಳಿಸಿದರು, ಮುಂದುವರಿದು ಅಧೀಕ್ಷಕ ಇಂಜಿನಿಯರ್(ವಿ) ರವರು ಹೆಚ್ಚುವರಿ ಪರಿವರ್ತವನ್ನು ಡಿ.ಡಿ.ಯು.ಜಿ.ಜೆ.ವೈ ಯೋಜನೆಯಡಿ ಅಳವಡಿಸಿ ಸಮಸ್ಯೆಯನ್ನು ಬಗೆಹರಿಸುವಂತೆ ಸೂಚಿಸಿದರು. |

ಮುಂದುವರಿದು ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ಮಳೆಗಾಲದಲ್ಲಿ ಉಂಟಾಗುವ ವಿದ್ಯುತ್ ಸಮಸ್ಯೆ/ಅಡಚಣೆಯನ್ನು ಸಕಾಲದಲ್ಲಿ ನಿರ್ವಹಿಸಲು ಮೈಸೂರಿನ ಅಂದಾಜು 120 ಸಿಬ್ಬಂದಿಗಳನ್ನು ಕೊಡಗಿಗೆ ನಿಯೋಜಿಸಲಾಗಿರುವುದಾಗಿ ಮಾಹಿತಿ ಒದಗಿಸಿದರು ಹಾಗೂ ಪ್ರತಿ ಶಾಖಾ ಮಟ್ಟಕ್ಕೆ ವಿದ್ಯುತ್ ಕಂಬಗಳನ್ನು ಈಗಾಗಲೇ ನೀಡಲಾಗಿರುವುದಾಗಿ ತಿಳಿಸಿ ಮಳೆಗಾಲಕ್ಕೆ ಸಕಲ ರೀತಿಯಲ್ಲಿ ಸಜ್ಜಗಿರುವುದಾಗಿ ತಿಳಿಸಿದರು.

ಮುಂದುವರಿದು ಐ.ಪಿ.ಡಿ.ಎಸ್ ಹಾಗೂ ದೀನ್ ದಯಾಳ್ ಗ್ರಾಮ ವಿದ್ಯುತ್ ಅಭಿವೃದ್ಧಿ ಯೋಜನಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ.ಸುರೇಶ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ನಿಗಮದ ವತಿಯಿಂದ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯನಿರ್ವಾಹಕ ಇಂಜನಿಯರ್ (ವಿ)
ಸೆಸ್ಕ್, ಕಾರ್ಯ ಮತ್ತು ಪಾಲನೆ ವಿಭಾಗ
ಮಡಿಕೇರಿ